ತುಮಕೂರು ಡಿಸ್ಟ್ರಿಕ್ಟ್.

ತಾರೀಖು 21ನೇ ಸೆಪ್ಟಂಬರ್ 1887.

ತಿಪ್ಟೂರು ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಬೇವಾರಸಾಗಿರತಕ್ಕ ಈ ಕೆಳಗೆ ವಿವರಿಸೋಣಾಗಿರುವ ದಸ್ತೈವಜನ್ನ ಹಾಜರ್ ಮಾಡಿದವರೇ ಆಗಲಿ ಅಥವಾ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕರು ಯಾ ಹಕ್ಕುದಾರ್ರೇ ಆಗಲಿ ಈ ನೋಟೀಸ್ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ತಿಪ್ಟೂರು ಸಬ್ ರಿಜಿಸ್ಟ್ರಾರಲ್ಲಿ ಹಾಜರಾಗಿ ಸದರೀ ದಸ್ತೈವಜನ್ನ ವಾಪಸ್ ಪಡಿಯಲೂ ತಪ್ಪಿದರೆ ಸ್ ಸ 1877ನೇ ಇಸವಿ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟಿನ 85ನೇ ಸೆಕ್ಷನ್ ಅನುಸರಿಸಿ ನಾಶ ಮಾಡಲ್ಪಡುವದು:—

ದಸ್ತೈವಜಿನ ನಂಬರ್.	ದಸ್ತೈವಜನ್ನ ರಿಜಿಸ್ಟರ್ ಮಾಡಿದ ತಾರೀಖು.	ದಸ್ತೈವಜನ್ನ ರಿಜಿಸ್ಟರ್ ಮಾಡಿಸಿಕೊಂಡ ತಾರೀಖು.	ದಸ್ತೈವಜನ್ನ ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತೈವಜನ್ನ ಬರಸಿ ಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತೈವಜಿನ ಸ್ವಭಾವ ಮತ್ತು ಕಿಮ್ಮತ್ತು.
182 1885—86	8—8—85	15—8—85	29—8—85	ತಿಪ್ಟೂರು ತಾಲ್ಲೂಕು ನೊಣವಿನಕೆರೇ ಸಮ್ಮತು ಮಾಕನಹಳ್ಳಿ ಗ್ರಾಮಕ್ಕೆ ಸೇರಿದ ಚಿಕ್ಕಣ್ಣ ಕಟ್ಟಿ ಪಾಳ್ಯದಲ್ಲಿರುವ ವ್ಯವಾಚಾರದ ಬಳೇ ಪಟ್ಟೇರಯ್ಯನ ಮಗ ಚನ್ನಬಸಯ್ಯ	ತಿಪ್ಟೂರು ತಾಲ್ಲೂಕು ನೊಣವಿನಕೆರೇಯಲ್ಲಿರುವ ಹೊಸಮನೆ ನಾರಣಪ್ಪಯ್ಯಂಗಾರ್ ಮಾವ ಮುಯ್ಯಂಗಾರ್	ತನ್ನ ಬಾಬತು ತಿಪ್ಟೂರು ತಾಲ್ಲೂಕು ನೊಣವಿನಕೆರೇ ಸಮ್ಮತು ವಿಗ್ನ ಸಂತೆ ಗ್ರಾಮದ ಕೆರೇಹಿಂದೆ ಇರುವ ಅಡಿಕೆ, ತೆಂಗೂ ಮಿಶ್ರವಾದ ಸರ್ವೇನಂಬರ್ 92 ಎಕರೆ 1 ಕುಂಟೆ 19 ಆಕಾರ 15 ರೂಪಾಯಿವುಳ್ಳ ತೋಟ ಆಧಾರದ ವಂದು ನೂರು ರೂಪಾಯಿನ ಕಂತು ಪತ್ರ.

ಪಿ. ಎಸ್. ಕೃಷ್ಣಮೂರ್ತಿ,
ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 484.

ಮೃತಪಟ್ಟ ಭರಮಂಣನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಕರಡೀ ಅನಂತಪ್ಪನವರು ಮೃತಪಟ್ಟ ಸದರೀ ಭರಮಂಣನವರಿಗೆ ಸಹೋದರ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಸ್ಥಳದ ಸದರೀ ಕರಡೀ ಅನಂತಪ್ಪನವರು ಚನ್ನರಾಯಪಟ್ಟಣ ತಾಲ್ಲೂಕು ಬೆಳಗೊಳದ ವಾಸಸ್ಥನಾಗಿ ಮೃತಪಟ್ಟ ಭರಮಂಣನವರ ಜಿಂದಗೀ ಬಗ್ಯಾಗಿ ಬರತಕ್ಕ 5,000 ರೂಪಾಯಿ ಸಾಲವನ್ನು ಪಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕರಡೀ ಅನಂತಪ್ಪನವರ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 10ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಭರಮಂಣನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಅರ್ಜೀ ನಂಬರ್ 499.

ಮೃತಪಟ್ಟ ದುಂಡೇಗವ್ವಜರ ಆಸ್ತಿ ವಿಷಯದಲ್ಲಿ—

ಅರ್ಜೀದಾರ 1ನೇ ನಂಜೇಗವ್ವ 2ನೇ ದುಂಡೇಗವ್ವ 3ನೇ ಮಾದೇಗವ್ವ 2—3ನೇ ಮೈನರ್ ಗಾರ್ಡಿಯನ್ ತಾಯಿ ಮಾದಮ್ಮ, ಮೃತಪಟ್ಟ ಸದರೀ ದುಂಡೇಗವ್ವರಿಗೆ ಮಕ್ಕಳು, ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಚಾಮರಾಜನಗರ ತಾಲ್ಲೂಕು ಸಂತೇಮರಹಳ್ಳಿ ಸ್ಥಳದ ಸದರೀ 1ನೇ ನಂಜೇಗವ್ವ, ಮಾದಮ್ಮನೂ ಸಹ ಸದರೀ ವಾಸಸ್ಥನಾಗಿ ಮೃತಪಟ್ಟ ದುಂಡೇಗವ್ವರ ಜಿಂದಗೀ ಬಗ್ಯಾಗಿ ಬರತಕ್ಕ